**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ: 27ಕ್ಕೆ ಉತ್ತರ".**

**ವಿಷಯ:** ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ದುಗ್ಗಸಂದ್ರ ಹೋಬಳಿ, ಕೊಂಡತಿಮ್ಮಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 70 ರಲ್ಲಿ ಸರ್ಕಾರಿ ಗೋಮಾಳದ 120 ಎಕರೆ ಕಾಯ್ದಿರಿಸಿದ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡಿ, ಹೊರ ರಾಜ್ಯ ಹಾಗೂ ಹೊರ ದೇಶಗಳಿಗೆ ಕಲ್ಲುಗಳನ್ನು ರಫ್ತು ಮಾಡಲಾಗುತ್ತಿದ್ದು ಇದರಿಂದಾಗಿ ಸದರಿ ಪ್ರದೇಶದಲ್ಲಿರುವ ಪುರಾತನ ಓಬಳೇಶ್ವರ ದೇವಸ್ಥಾನದ ಭಕ್ತಾದಿಗಳ ಪೂಜಾ ಕೈಂಕರ್ಯಕ್ಕೆ ಬಹಳ ತೊಂದರೆಯಾಗಿರುತ್ತದೆ. ಜಿಂಕೆಗಳು ಹಾಗೂ ರಾಸುಗಳ ನೀರಿಗಾಗಿ ನಿರ್ಮಿಸಲಾಗಿದ್ದ ದೊಡ್ಡಕೆರೆಯು ಸಹ ಅಕ್ರಮ ಗಣಿಗಾರಿಕೆಯಿಂದ ನೀರು ಕಲುಷಿತವಾಗಿ, ಯಾವುದೇ ಪ್ರಾಣಿಗಳು ನೀರು ಕುಡಿಯಲು ಆಗದೆ, ಸಂಚರಿಸುವುದಕ್ಕೂ ಆಗುತ್ತಿಲ್ಲ. ಅರಣ್ಯ ಅಧಿಕಾರಿಗಳು ಅಕ್ರಮ ಗಣಿಗಾರಿಕೆಯಲ್ಲಿ ಷಾಮೀಲಾಗಿ, ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವ ಸಾರ್ವಜನಿಕ ಹಿತಾಸಕ್ತಿಯ ಕುರಿತಾದ ಗಂಭೀರ ಸಮಸ್ಯೆ ಕುರಿತು.

*****

**ಉತ್ತರ:-**

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ದುಗ್ಗಸಂದ್ರ ಹೋಬಳಿ, ಕೊಂಡತಿಮ್ಮನಹಳ್ಳಿ ಗ್ರಾಮ, ಸರ್ವೆ ನಂ.70ರಲ್ಲಿ ಕಂದಾಯ ದಾಖಲೆ ಆರ್.ಟಿ.ಸಿ. ಯಂತೆ ಒಟ್ಟು 375.04 ಎಕರೆ ಪ್ರದೇಶವಿರುತ್ತದೆ. ಇದರಲ್ಲಿ ಹಿಂದಿನ ಘನ ಮೈಸೂರು ಸರ್ಕಾರದ ಅಧಿಸೂಚನೆ ಸಂಖ್ಯೆ:R.6357-Ft.96-13-4 Dated:25th January 1915 ರಂತೆ 90.00 ಎಕರೆ ಪ್ರದೇಶವು ಗೋಕುಂಟೆ ಗೊಲ್ಲಹಳ್ಳಿ ಮೀಸಲು ಅರಣ್ಯ ಪ್ರದೇಶಕ್ಕೆ ಒಳಪಟ್ಟಿರುತ್ತದೆ. ಉಳಿದ ಪ್ರದೇಶವು ಖರಾಬು ಗೋಮಾಳ ಮತ್ತು ಪಟ್ಟಾ ಜಮೀನಿನಿಂದ ಕೂಡಿರುತ್ತದೆ.

ಸರ್ವೆ ನಂಬರ್ 70ರ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಈವರೆವಿಗೂ ಅಧಿಕೃತವಾಗಿ ಯಾವುದೇ ಕಲ್ಲುಗಣಿಗಾರಿಕೆಗೆ ಅನುಮತಿ/ ಮಂಜೂರಾತಿ ನೀಡಿರುವುದಿಲ್ಲ. ಅಲ್ಲದೆ ಯಾವುದೇ ಅನಧಿಕೃತ ಗಣಿಗಾರಿಕೆಗೆ ಅವಕಾಶ ನೀಡಿರುವುದಿಲ್ಲ. ಆದಾಗ್ಯೂ ವ್ಯಾಪ್ತಿಯಲ್ಲಿ ಸ್ಥಳೀಯ ದಲಿತರು ಹಾಗೂ ಕೂಲಿಕಾರ್ಮಿಕರು ಇಲಾಖಾ ಸಿಬ್ಬಂದಿಯ ಕಣ್ತಪ್ಪಿಸಿ ಆಗಾಗ್ಗ ಅನಧಿಕೃತವಾಗಿ ಕಲ್ಲುಗಣಿಗಾರಿಕೆ ಮಾಡುತ್ತಿದ್ದ ಪ್ರಕರಣಗಳು ಕಂಡುಬಂದ ಸಂದರ್ಭದಲ್ಲಿ ಅರಣ್ಯ ಇಲಾಖೆಯಿಂದ ತಡೆದು ಅಂತಹವರ ವಿರುದ್ಧ ಅರಣ್ಯ ಅಪರಾಧ ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮಕೈಗೊಳ್ಳಲಾಗಿರುತ್ತದೆ.

ಅರಣ್ಯ ಪ್ರದೇಶದಲ್ಲಿ ಯಾವುದೇ ರೀತಿಯ ಯಂತ್ರಗಳ ಸಹಾಯದಿಂದ ಗಣಿಗಾರಿಕೆ ನಡೆಸಿ ದೇಶ ವಿದೇಶಗಳಿಗೆ ರಫ್ತು ಮಾಡುತ್ತಿರುವ ಪ್ರಕರಣಗಳು ಯಾವುದು ವರದಿಯಾಗಿರುವುದಿಲ್ಲ.

ಅಲ್ಲದೆ, ಕಳೆದ ಒಂದು ವರ್ಷದಿಂದ ಸದರಿ ಅರಣ್ಯ ಪ್ರದೇಶದಲ್ಲಿ ಗಸ್ತು ತೀವ್ರಗೊಳಿಸಿ ಅಂತಹ ಪ್ರಕರಣಗಳು ನಡೆಯದಂತೆ ಜಾಗ್ರತೆ ವಹಿಸಿ ಅನಧಿಕೃತ ಗಣಿಗಾರಿಕೆಯನ್ನು ನಿಯಂತ್ರಿಸಲಾಗಿದೆ. ಸರ್ವೆ ನಂಬರ್ 70ರ ಪ್ರದೇಶವು ಅರಣ್ಯ ಮತ್ತ ಗೋಮಾಳ ಪ್ರದೇಶ ಒಳಗೊಂಡಿದ್ದು, ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಗಣಿಕಾರಿಕೆಯನ್ನು ತಡೆಯಲು ಶಾಶ್ವತ ಕ್ರಮಕೈಗೊಳ್ಳುವ ಸಲುವಾಗಿ ಅರಣ್ಯ ಪ್ರದೇಶದ ಗಡಿಯಂಚಿನಲ್ಲಿ ಆರ್.ಸಿ.ಸಿ.ಪಿಲ್ಲರ್/ಚೈನ್ ಲಿಂಕ್‌ಮೆಶ್ ಬೇಲಿ ನಿರ್ಮಾಣ ಮಾಡವ ಕುರಿತು ಪರಿಶೀಲಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಪ್ರಸ್ತುತ ಯಾವುದೇ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವುದಿಲ್ಲ.

Belad

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.**

**ಕಡತ ಸಂಖ್ಯೆ: ಎಫ್‌ಇಇ 16 ಎಫ್‌ಎಫ್‌ಎಂ 2023 (ಇ)**